ನಕಲಿ, ಬೋಗಸ್, ಪಡಿತರ ಚೀಟಿದಾರರು

1673 (2826); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ನಕಲಿ, ಬೋಗಸ್ ಪಡಿತರ ಚೀಟಿದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕ್ರಮ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆಯೇ;

ಆ) ನಕಲಿ ಪಡಿತರ ಚೀಟಿದಾರರು ಸ್ವಯಂ ಪ್ರೇರಣೆಯಿಂದ ಹಿಂತಿರುಗಿಸಲು ಎಷ್ಟು ಕಾಲಾವಕಾಶ ನೀಡಲಾಗಿದೆ. ನಂತರ ಕೈಗೊಳ್ಳಲು ನಿರ್ಧರಿಸಿರುವ ಕ್ರಮ ಏನು?

ಇ) ಅನ್ನಭಾಗ್ಯ ಯೋಜನೆಯಡಿ ಅಕ್ಕಿ ವಿತರಿಸುವ ಕಾರ್ಯದಲ್ಲಿ ಲೋಪ ದೋಷ ಆಗಿರುವುದು ಸರ್ಕಾರದಲ್ಲಿ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಅದರ ನಿವಾರಣೆಗೆ ಕೈಗೊಂಡ ಕ್ರಮಗಳಾವುವು (ವಿವರ ಒದಗಿಸುವುದು);

ಈ) ಪ್ರತಿ ತಿಂಗಳು ಆಹಾರ ಅದಾಲತ್ ನಡೆಸಲು ತೀರ್ಮಾನಿಸಲಾಗಿದೆಯೇ; ಅದರಲ್ಲಿ ಸಮಸ್ಯೆಗಳಿಗೆ ಯಾವ ರೀತಿಯ ಪರಿಹಾರ ಸೂಚಿಸಲಾಗುವುದು;

ಉ) ನ್ಯಾಯಬೆಲೆ, ಅಂಗಡಿಗಳಲ್ಲಿ ಪಡಿತರ ವಿತರಣೆಯಲ್ಲಿ ಪಾರದರ್ಶಕತೆ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಈ ಸಮಸ್ಯೆ ನಿವಾರಣೆಗೆ ಕೈಗೊಂಡ ಕ್ರಮಗಳೇನು?

ಊ) ಅನ್ನಭಾಗ್ಯ ಯೋಜನೆ ಆರಂಭಿಸಿದ ಮೇಲೆ ರಾಜ್ಯದ ಹಲವೆಡೆ ಭತ್ತ ಬೆಳೆಯುವ ಪ್ರಮಾಣ ಹೆಚ್ಚಾಗಿದೆಯೆ; ಯಾವ ಭಾಗದಲ್ಲಿ ಹೆಚ್ಚಾಗಿದೆ. ಎಷ್ಟು ಪ್ರಮಾಣ ಹೆಚ್ಚಾಗಿದೆ (ಅಂಕಿ ಅಂಶ ಸಮೇತ ವಿವರಿಸುವುದು)?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

ಅ) ಹೌದು ನಿರ್ಧರಿಸಿದೆ.

ಆ) ನಕಲಿ ಪಡಿತರ ಚೀಟಿದಾರರಿಗೆ ಸ್ವಯಂ ಪ್ರೇರಣೆಯಿಂದ ನಕಲಿ ಪಡಿತರ ಚೀಟಿಗಳನ್ನು ಹಿಂತಿರುಗಿಸಲು ಕಾಲಾವಕಾಶ ನೀಡಲು ಪರಿಶೀಲಿಸಲಾಗುತ್ತಿದೆ.

ಇ) ಅನ್ನಭಾಗ್ಯ ಯೋಜನೆಯ ದುರುಪಯೋಗವಾದ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಅನ್ನಭಾಗ್ಯ ಯೋಜನೆಯು ಜಾರಿಯಾಗಿರುವ ಜೂನ್ 2014ರ ಅಂತ್ಯಕ್ಕೆ ಅಕ್ಕಿ ಅಕ್ರಮ ಕಳ್ಳಸಾಗಾಣಿಕೆಗೆ ಸಂಬಂಧಿಸಿದಂತೆ 78 ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ. ಒಟ್ಟು 208 ಮಂದಿಗಳ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ 1955ರಡಿ ಕ್ರಮಕೈಗೊಳ್ಳಲಾಗಿದೆ. ಅನ್ನಭಾಗ್ಯ ಯೋಜನೆಯ ಅಕ್ಕಿ ವಿತರಣೆಯಲ್ಲಿ ಅಕ್ರಮ ಎಸಗಿದ ಒಟ್ಟು 208 ನ್ಯಾಯಬೆಲೆ ಅಂಗಡಿಗಳ ವಿರುದ್ಧ ಕರ್ನಾಟಕ ಅಗತ್ಯ ವಸ್ತುಗಳ ಸಾ.ವಿ.ಪ. ನಿಯಂತ್ರಣ ಆದೇಶ 1992ರಲ್ಲಿ ಕ್ರಮ ಕೈಗೊಳ್ಳಲಾಗಿದ್ದು, 223 ಮಂದಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಅನ್ನಭಾಗ್ಯ ಯೋಜನೆಯನ್ನು ಸಾಂದರ್ಭಿಕವಾಗಿ ಕಾರ್ಯರೂಪಕ್ಕೆ ಬರುವಂತೆ ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1. ತಾಲ್ಲೂಕು ಸಗಟು ಮಳಿಗೆಗಳನ್ನು ಪರಿಶೀಲನೆ ಮಾಡಲು ಆಹಾರ ಮತ್ತು ಕಂದಾಯ ಸಿಬ್ಬಂದಿಗಳ ತಂಡ ರಚಿಸಿ ಗೋದಾಮಿನ ದಾಸ್ತಾನನ್ನು ಪರಿಶೀಲಿಸಿದ ನಂತರವೇ ನ್ಯಾಯಬೆಲೆ ಅಂಗಡಿಗಳಿಗೆ ವಿತರಣೆ ಮಾಡಲು ಅನುಕ್ರಮವಾಗಿ ನೀಡುವಂತೆ ಸೂಚಿಸಲಾಗಿದೆ.

2. ಸಂಬಂಧಿಸಿದ ಅಧಿಕಾರಿಗಳಿಗೆ ಅಗತ್ಯ ವಸ್ತುಗಳ ಕಾಯ್ದೆ 1955 ರಡಿ ಹಾಗೂ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 1992ರಡಿ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಸೂಚನೆ ನೀಡಿರುತ್ತದೆ.

3. ಯೋಜನೆಯ ಅರ್ಹ ಫಲಾನುಭವಿಗಳಿಗೆ ನ್ಯಾಯಬೆಲೆ ಅಂಗಡಿ ಗಳಿಂದ ನಿಗಧಿತ ವೇಳೆ ಹಾಗೂ ಸಮಯದಲ್ಲಿ ಪಡಿತರ ಪದಾರ್ಥಗಳು ದೊರೆಯುತ್ತಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಲು ಫೆಬ್ರವರಿ–2014 ರಿಂದ ಪಡಿತರ ಖಾತರಿ ಯೋಜನೆಯನ್ನು ಜಾರಿಗೆತರಲಾಗಿದೆ ಹಾಗೂ ಈ ಯೋಜನೆಯ ಮೇಲ್ವುಸ್ತು ವಾರಿಗಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ.

4. ಪಡಿತರ ಚೀಟಿದಾರರ ದೂರು/ಅಹವಾಲುಗಳನ್ನು ಪರಿಶೀಲಿಸಲು ದಿನಾಂಕ: 01.06.2014ರಿಂದ ಜಾರಿಗೆ ಬರುವಂತೆ ಪ್ರತಿ ತಿಂಗಳು 7ನೇ ತಾರೀಖಿನಂದು ಅನ್ನಭಾಗ್ಯ ಅದಾಲತ್ ನಡೆಸಲು ಯೋಜನೆಯನ್ನು ಜಾರಿಗೆ ತರಲಾಗಿದೆ.

5. ಅನ್ನಭಾಗ್ಯ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿ ಸಲು ನ್ಯಾಯಬೆಲೆ ಅಂಗಡಿ, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಜಾಗೃತ ಸಮಿತಿಗಳನ್ನು ರಚಿಸಲಾಗುತ್ತಿದೆ.

6. ಪಡಿತರ ಚೀಟಿದಾರರಿಗೆ ಸಿರಯಾದ ಪ್ರಮಾಣ ಮತ್ತು ದರದಲ್ಲಿ ಆಹಾರಧಾನ್ಯ ವಿತರಿಸುವುದನ್ನು ಖಚಿತಪಡಿಸಿಕೊಳ್ಳಲು ನ್ಯಾಯ ಬೆಲೆ ಅಂಗಡಿಗಳಲ್ಲಿ ಇ–ಪಡಿತರ ಯಂತ್ರಗಳನ್ನು ಸ್ಥಾಪಿಸಲಾಗು ತ್ತಿದೆ.

7. ವಿಭಾಗ ಮಟ್ಟದಲ್ಲಿ ಗೋದಾಮುಗಳು ಮತ್ತು ನ್ಯಾಯಬೆಲೆ ಅಂಗಡಿಗಳನ್ನು ತಪಾಸಣೆ ಮಾಡುವ ಸಲುವಾಗಿಯೇ ಕಾರ್ಯ ಪಡೆ ರಚಿಸಲು ತಿಳಿಸಿ ಪ್ರಾದೇಶಿಕ ಆಯುಕ್ತರುಗಳಿಗೆ ನಿರ್ದೇಶನ ನೀಡಲಾಗಿದೆ.

8. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತನಿಖಾ ತಂಡವನ್ನು ರಚಿಸಿ ಗೋದಾಮುಗಳ ತನಿಖೆ ನಡೆಸುವಂತೆ ಸೂಚನೆ ನೀಡಲಾಗಿದೆ.

9. ತನಿಖೆ ನಡೆಸಿದ ಬಗ್ಗೆ ಮೇಲ್ವಿಚಾರಣೆ ನಡೆಸಲು ಆಯಾ ಜಿಲ್ಲೆಗಳ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಲಾಗಿದೆ.

10. ಕಂದಾಯ ಆರ್‌ಡಿಪಿಆರ್ ನಗರಾಭಿವೃದ್ಧಿ ಇಲಾಖೆ ಅಧಿಕಾರಿ ಗಳನ್ನೊಳಗೊಂಡಂತೆ ನ್ಯಾಯಬೆಲೆ ಅಂಗಡಿ ಹಂತದ ಅಧಿಕಾರಿ ಗಳನ್ನು ನೇಮಿಸಲಾಗಿದ್ದು (ಎಫ್‌ಎಲ್‌ಓ) ಈ ಅಧಿಕಾರಿ ಗಳಿಂದಲೇ ಹೊಸ ಅರ್ಜಿ ಹಾಗೂ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳ ನೈಜತೆ ಪರಿಶೀಲಿಸಲಾಗುತ್ತಿದೆ.

11. ಇದರ ಜೊತೆಗೆ ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿರುವ ಸಂಪೂರ್ಣ ಪಡಿತರ ಚೀಟಿಗಳ ಸಮಗ್ರ ತನಿಖೆ ನಡೆಸಿ ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗುತ್ತಿದೆ. ಈ ಬಗ್ಗೆ ಆಹಾರ ನಿರೀಕ್ಷಕರಿಗೆ ಪ್ರತಿ ಮಾಹೆ ಗುರಿ ನಿಗದಿಪಡಿಸಲಾಗಿದೆ.

12. ಪಡಿತರ ಚೀಟಿದಾರರಿಗೆ ಆಹಾರಧಾನ್ಯಗಳ ವಿತರಣೆ ಮಾಡಿದ ನಂತರ ಪಡಿತರ ವಸ್ತುಗಳ ಮಾರ್ಗಾಂತರ ಮತ್ತು ಸೋರು ವಿಕೆಯನ್ನು ತಡೆಯಲು 3 ಹಂತಗಳ ತನಿಖೆಯನ್ನು ಮಾಡಲು ನಿರ್ದೇಶನ ನೀಡಲಾಗಿದೆ. ವಿವರ ಕೆಳಕಂಡಂತಿದೆ.

    ಎ) ಸಗಟು ಮಾರಾಟ ಮಳಿಗೆಯವರು ನ್ಯಾಯಬೆಲೆ ಅಂಗಡಿ ಗಳಿಗೆ ವಿತರಿಸಲು ಪ್ರತಿ ತಿಂಗಳ 20ನೇ ತಾರೀಖಿನೊಳಗಾಗಿ ಎತ್ತುವಳಿ ಮಾಡಿದ ನಂತರ ದಾಸ್ತಾನು ಹಂಚಿಕೆ ಆದೇಶದಲ್ಲಿ ನಮೂದಿಸಿರುವ ಪ್ರಮಾಣ ಮತ್ತು ಉತ್ತಮ ಗುಣಮಟ್ಟ ದಲ್ಲಿರುವುದೇ ಎಂದು ಜಿಲ್ಲಾಧಿಕಾರಿಗಳು ರಚಿಸಿದ ತಿಖಾ ತಂಡದಿಂದ ಪರಿಶೀಲಿಸಿ ದೃಢೀಕರಿಸುವುದು. ಎಲ್ಲಾ ನ್ಯಾಯ ಬೆಲೆ ಅಂಗಡಿ ವರ್ತಕರು ಪ್ರತಿ ತಿಂಗಳು 1ನೇ ತಾರೀಖಿ ನಿಂದ ಪಡಿತರ ಚೀಟಿದಾರರಿಗೆ ವಿತರಣೆ ಮಾಡಲು ಎತ್ತುವಳಿ ಮಾಡಿರುವ ಆಹಾರಧಾನ್ಯವು ಹಂಚಿಕೆ ಆದೇಶದ ಪ್ರಮಾಣದಲ್ಲಿ ಹಾಗೂ ಉತ್ತಮ ಗುಣಮಟ್ಟದಲ್ಲಿರುವುದೇ

ಎಂದು ಪರಿಶೀಲಿಸಿ ಆಹಾರ ನಿರೀಕ್ಷಕರು ದೃಢೀಕರಿಸಬೇಕು. ಇದೇ ರೀತಿ ನ್ಯಾಯಬೆಲೆ ಅಂಗಡಿ/ಚಿಲ್ಲರೆ ಸೀಮೆಎಣ್ಣೆ ವರ್ತಕರಲ್ಲಿರುವ ದಾಸ್ತಾನು ಮತ್ತು ಗುಣಮಟ್ಟವನ್ನು ಪರಿಶೀಲಿಸಿ ಆಹಾರನಿರೀಕ್ಷಕರು ದೃಢೀಕರಿಸಬೇಕು.

ಬಿ) ಸಗಟು ಮಳಿಗೆ ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಧಾನ್ಯಗಳನ್ನು ವಿತರಿಸುವಾಗ ಪರಿಶೀಲಿಸಿ ದೃಢೀಕರಿಸುವುದು.

ಸಿ) ಪ್ರತಿ ಸಗಟು ಮಾರಾಟ ಮಳಿಗೆ ವರ್ತಕರು ತಿಂಗಳ ಅಂತ್ಯ ದಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ ಪಡಿತರಧಾನ್ಯಗಳ ವಿತರಣೆ ಯನ್ನು ಪೂರ್ಣಗೊಳಿಸಲಿರುವುದರಿಂದ ಮುಂದಿನ ಮಾಹೆಯ 1ನೇ ತಾರೀಖಿನಂದೇ ಸಗಟು ಮಾರಾಟ ಮಳಿಗೆಯ ಅಂತಿಮ ದಾಸ್ತಾನನ್ನು ಪರಿಶೀಲಿಸಿ ದೃಢೀಕರಿ ಸುವುದು.

13. ಎಲ್ಲಾ ನ್ಯಾಯಬೆಲೆ ಅಂಗಡಿ ವರ್ತಕರು ಪಡಿತರ ಚೀಟಿದಾರರಿಗೆ ಪ್ರತಿ ತಿಂಗಳ ಪಡಿತರಧಾನ್ಯಗಳು ವಿತರಣೆಯ ನಂತರ ನ್ಯಾಯ ಬೆಲೆ ಅಂಗಡಿಗಳ ಅಂತಿಮ ದಾಸ್ತಾನಿನ ವಿವರಗಳನ್ನು ಪರಿಶೀಲಿ ಸಬೇಕು. ಇದಕ್ಕಾಗಿ ಪ್ರತಿ ಕಾರ್ಡುದಾರರಿಗೆ ವಿತರಿಸಲಾದ ಪಡಿತರ ವಿವರಗಳ ತಃಖ್ತೆಯನ್ನು ದಾಸ್ತಾನುವಹಿ ಹಾಗೂ ಬಿಲ್ ಪುಸ್ತಕಗಳನ್ನು ಪರಿಶೀಲಿಸಿ ದೃಢೀಕರಿಸಬೇಕು. ಇದೇ ರೀತಿ ಸೀಮೆಎಣ್ಣೆಯ ಅಂತಿಮ ದಾಸ್ತಾನಿನ ವಿವರವನ್ನು ಸಹ ಪರಿಶೀಲಿಸುವುದು.

14. 2010ರ ಹಿಂದೆ ವಿತರಿಸಲಾದ ಪಡಿತರ ಚೀಟಿಗಳಲ್ಲಿ ಭಾವಚಿತ್ರ ಹಾಗೂ ಬಯೋಮೆಟ್ರಿಕ್ ಸಂಗ್ರಹಿಸುವ ಮೂಲಕ ಅನರ್ಹ ಪಡಿತರ ಚೀಟಿಗಳಿಗೆ ಕಡಿವಾಣ ಹಾಕುವ ವ್ಯವಸ್ಥೆ ಮಾಡಲಾಗಿದೆ.

15. ಇಲಾಖೆಯ ವೆಬ್‌ಸೈಟ್‌ನಲ್ಲಿ ಎಲ್ಲ ಪಡಿತರ ಚೀಟಿಗಳ ಮಾಹಿತಿ ಯನ್ನು ಸಾರ್ವಜನಿಕರಿಗೆ ಪ್ರದರ್ಶಿಸಲಾಗಿದೆ. ಈ ಮಾಹಿತಿ

ಯನ್ನು ಆಧರಿಸಿ ಸಾರ್ವಜನಿಕರು ಯಾವುದೇ ಪಡಿತರ ಚೀಟಿ ಬಗ್ಗೆ ತಮ್ಮ ಅಭಿಪ್ರಾಯವನ್ನು ದಾಖಲಿಸಬಹುದು. ಇದರ ಆಧಾರದ ಮೇರೆಗೆ ಅನರ್ಹ ಪಡಿತರ ಚೀಟಿ ಹೊಂದಿರುವ ಮಾಹಿತಿ ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುವುದು.

16. ಅನ್ನಭಾಗ್ಯ ಯೋಜನೆಯ ಲೋಪದೋಷಗಳ ಬಗ್ಗೆ ಸಾರ್ವಜನಿಕರಿಂದ ಬರುವ ದೂರುಗಳನ್ನು ಸಕಾಲದಲ್ಲಿ ಇತ್ಯರ್ಥ ಪಡಿಸುವ ಸಲುವಾಗಿ ಗ್ರಾಹಕರ ಸಹಾಯವಾಣಿ (1967 ಉಚಿತ ಕರೆ ಕೇಂದ್ರ) ಸ್ಥಾಪಿಸಲಾಗಿದೆ. ಆನ್‌ಲೈನ್ ಮೂಲಕವು ಸಹ ದೂರು ಸಲ್ಲಿಸಬಹುದು.

17. ಪ್ರತಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯ್ತಿ ಮಟ್ಟದ ನೋಡಲ ಅಧಿಕಾರಿಯು ತಿಂಗಳಿಗೊಮ್ಮೆ ಆ ವ್ಯಾಪ್ತಿಯ ಕನಿಷ್ಠ 1 ನ್ಯಾಯಬೆಲೆ ಅಂಗಡಿಯನ್ನು ರ್‍ಯಾಂಡಮ್ ಆಗಿ ಪರಿಶೀಲಿಸಲು ನಿರ್ದೇಶಿಸಲಾಗಿದೆ.

18. ನಗರ/ಪಟ್ಟಣ/ಪುರಸಭೆಗಳ ಸ್ಥಳೀಯ ಪ್ರಾಧಿಕಾರ ಅಧಿಕಾರಿಗಳು ತಿಂಗಳಿಗೊಮ್ಮೆ ತಮ್ಮ ವ್ಯಾಪ್ತಿಯಲ್ಲಿ ಕನಿಷ್ಠ 1 ನ್ಯಾಯಬೆಲೆ ಅಂಗಡಿಯನ್ನು ರ್‍ಯಾಂಡಮ್ ಆಗಿ ಪರಿಶೀಲಿಸಲು ನಿರ್ದೇಶಿಲಾಗಿದೆ.

19. ಪಡಿತರ ಚೀಟಿದಾರರು ತಮ್ಮ ಹಕ್ಕಿನ ಆಹಾರಧಾನ್ಯ ಹಂಚಿಕೆ ಬಗ್ಗೆ ತಿಳಿಯಲು ಎಸ್.ಎಂ.ಎಸ್. ವ್ಯವಸ್ಥೆ ಜಾರಿಗೊಳಿಸಲಾಗಿದೆ. ಎಸ್.ಎಂ.ಎಸ್. ಮೂಲಕ ಅವರ ಹಕ್ಕಿನ ಆಹಾರಧಾನ್ಯ ಮಾಹಿತಿ ಪಡೆಯಬಹುದು.

20. ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿವಾರು ವಿತರಿಸಲಾಗುವ ಆಹಾರಧಾನ್ಯ ಹಂಚಿಕೆ ವಿವರಣ ತಃಖ್ತೆಯನ್ನು ನೀಡಲಾಗುತ್ತಿದೆ. ಅದರಲ್ಲಿ ಪ್ರತಿ ಕಾರ್ಡಗೆ ನೀಡಲಾಗುತ್ತಿರುವ ಹಂಚಿಕೆ ಪ್ರಮಾಣ, ದರದ ಮಾಹಿತಿ ಲಭ್ಯವಿದ್ದು, ಪಡಿತರ ಎತ್ತುವಳಿ

ಮಾಡುವ ವೇಳೆ ಅದರಲ್ಲಿ ಎಲ್ಲಾ ಕಾರ್ಡುದಾರರು ಸಹಿ ಮಾಡುವುದರಿಂದ ಅವರಿಗೆ ನೀಡಲಾಗುವ ವಿತರಣಾ ಪ್ರಮಾಣ ಕಾರ್ಡುದಾರರಿಗೆ ತಿಳಿಸಯುತ್ತದೆ. "ಅನ್ನಭಾಗ್ಯ" ಯೋಜನೆಯಡಿ ವಿತರಣೆಯಾಗುವ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ಮಾದ್ಯಮಗಳಲ್ಲಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಹೌದು. ಪ್ರತಿ ತಿಂಗಳ 7ನೇ ತಾರೀಖಿನಂದು ನ್ಯಾಯಬೆಲೆ ಅಂಗಡಿ ಹಂತದಲ್ಲಿ ಸರ್ಕಾರಿ ಅಧಿಕಾರಿಯ ಸಮಕ್ಷಮದಲ್ಲಿ ಅನ್ನಭಾಗ್ಯ ಅದಾಲತ್ ಹಮ್ಮಿಕೊಳ್ಳಲಾಗುತ್ತಿದ್ದು, ಪಡಿತರ ಚೀಟಿದಾರರ ಅಹವಾಲುಗಳನ್ನು ಪರಿಶೀಲಿಸಿ ಅವರ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಸಮಸ್ಯೆ ನಿವಾರಣೆಗೆ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1. ಯೋಜನೆಯ ಅರ್ಹ ಫಲಾನುಭವಿಗಳಿಗೆ ನ್ಯಾಯಬೆಲೆ ಅಂಗಡಿಗಳಿಂದ ನಿಗದಿತ ವೇಳೆ ಹಾಗೂ ಸಮಯದಲ್ಲಿ ಪಡಿತರ ಪದಾರ್ಥಗಳು ದೊರೆಯುತ್ತಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಲು ಫೆಬ್ರವರಿ–2014 ರಿಂದ ಪಡಿತರ ಖಾತರಿ ಯೋಜನೆಯನ್ನು ಜಾರಿಗೆತರಲಾಗಿದೆ. ಹಾಗೂ ಈ ಯೋಜನೆಯ ಮೇಲುಸ್ತುವಾರಿಗಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ.

2. ಪಡಿತರ ಚೀಟಿದಾರರಿಗೆ ಸರಿಯಾದ ಪ್ರಮಾಣ ಮತ್ತು ದರದಲ್ಲಿ ಆಹಾರಧಾನ್ಯ ವಿತರಿಸುವುದನ್ನು ಖಚಿತಪಡಿಸಿಕೊಳ್ಳಲು ನ್ಯಾಯಬೆಲೆ ಅಂಗಡಿಗಳಲ್ಲಿ ಇ–ಪಡಿತರ ಯಂತ್ರಗಳನ್ನು ಸ್ಥಾಪಿಸಲಾಗುತ್ತಿದೆ.

3. ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿವಾರು ವಿತರಿಸ ಲಾಗುವ ಆಹಾರಧಾನ್ಯ ಹಂಚಿಕೆ ವಿವರದ ತಃಖ್ತೆಯನ್ನು ನೀಡಲಾಗುತ್ತಿದೆ. ಅದರಲ್ಲಿ ಪ್ರತಿ ಕಾರ್ಡಗೆ ನೀಡಲಾಗುತ್ತಿರುವ ಹಂಚಿಕೆ ಪ್ರಮಾಣ, ದರದ ಮಾಹಿತಿ ಲಭ್ಯವಿದ್ದು, ಪಡಿತರ ಎತ್ತುವಳಿ ಮಾಡುವ ವೇಳೆ ಅದರಲ್ಲಿ ಎಲ್ಲಾ ಕಾರ್ಡುದಾರರು ಸಹಿ ಮಾಡುವುದರಿಂದ ಅವರಿಗೆ ನೀಡಲಾಗುವ ವಿತರಣಾ ಪ್ರಮಾಣ ಕಾರ್ಡುದಾರರಿಗೆ ತಿಳಿಯುತ್ತದೆ.

4. ಇಲಾಖೆಯ ವೆಬ್‌ಸೈಟ್‌ನಲ್ಲಿ ಎಲ್ಲ ಪಡಿತರ ಚೀಟಿಗಳ ಮಾಹಿತಿ ಯನ್ನು ಸಾರ್ವಜನಿಕರಿಗೆ ಪ್ರದರ್ಶಿಸಲಾಗಿದೆ. ಈ ಮಾಹಿತಿ ಯನ್ನು ಆಧರಿಸಿ ಸಾರ್ವಜನಿಕರ ಯಾವುದೇ ಪಡಿತರ ಚೀಟಿ ಬಗ್ಗೆ ತಮ್ಮ ಅಭಿಪ್ರಾಯವನ್ನು ದಾಖಲಿಸಬಹುದು. ಇದರ ಆಧಾರದ ಮೇಲೆ ಅನರ್ಹ ಪಡಿತರ ಚೀಟಿ ಹೊಂದಿರುವ ಮಾಹಿತಿ ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುವುದು.

5. "ಅನ್ನಭಾಗ್ಯ" ಯೋಜನೆಯ ಲೋಪದೋಷಗಳ ಬಗ್ಗೆ ಸಾರ್ವ ಜನಿಕರಿಂದ ಬರುವ ದೂರುಗಳನ್ನು ಸಕಾಲದಲ್ಲಿ ಇತ್ಯರ್ಥಪಡಿ ಸುವ ಸಲುವಾಗಿ ಗ್ರಾಹಕರ ಸಹಾಯವಾಣಿ (ಉಚಿತ ಕರೆ ಕೇಂದ್ರ) ಸ್ಥಾಪಿಸಲಾಗಿದೆ. ಆನ್‌ಲೈನ್ ಮೂಲಕವು ಸಹ ದೂರು ಸಲ್ಲಿಸಬಹುದು.

6. ಪ್ರತಿ ತಿಂಗಳ 7ನೇ ತಾರೀಖಿನಂದು ನ್ಯಾಯಬೆಲೆ ಅಂಗಡಿ ಹಂತ ದಲ್ಲಿ ಅನ್ನಭಾಗ್ಯ ಅದಾಲತ್ ಹಮ್ಮಿಕೊಳ್ಳಲಾಗುತ್ತಿದ್ದು, ಪಡಿತರ ಚೀಟಿದಾರರ ಅಹವಾಲು ಪರಿಶೀಲಿಸಿ ಅವರ ಕುಂದುಕೊರತೆ ಪರಿಹರಿಸಲಾಗುತ್ತಿದೆ.

7. ಪ್ರತಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯತ್ತಿ ಮಟ್ಟದ ನೋಡಲ್ ಅಧಿಕಾರಿಯು ತಿಂಗಳಿಗೊಮ್ಮೆ ಆ ವ್ಯಾಪ್ತಿಯ

ಕನಿಷ್ಠ ನ್ಯಾಯಬೆಲೆ ಅಂಗಡಿಯನ್ನು ರ್‍ಯಾಂಡಮ್ ಆಗಿ ಪರಿಶೀಲಿಸಲು ನಿರ್ದೇಶಿಲಾಗಿದೆ.

8. ನಗರ/ಪಟ್ಟಣ/ಪುರಸಭೆಗಳ ಸ್ಥಳೀಯ ಪ್ರಾಧಿಕಾರ ಅಧಿಕಾರಿಗಳು ತಿಂಗಳಿಗೊಮ್ಮೆ ತಮ್ಮ ವ್ಯಾಪ್ತಿಯಲ್ಲಿ ಕನಿಷ್ಠ 1 ನ್ಯಾಯಬೆಲೆ ಅಂಗಡಿಯನ್ನು ರ್‍ಯಾಂಡಮ್ ಆಗಿ ಪರಿಶೀಲಿಸಲು ನಿರ್ದೇಶಿಸಲಾಗಿದೆ.

9. ಅನ್ನಭಾಗ್ಯ ಅದಾಲತ್ ನಡೆಸಲು ಜಿಲ್ಲಾಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಉಪ ಕಾರ್ಯದರ್ಶಿಗಳಾಗಿ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿಗಳನ್ನು ಬಳಸಿಕೊಳ್ಳಲು ಸೂಚಿಸಲಾಗಿದೆ.

10. ಪಡಿತರ ಚೀಟಿದಾರರು ತಮ್ಮ ಹಕ್ಕಿನ ಆಹಾರಧಾನ್ಯ ಹಂಚಿಕೆ ತಿಳಿಯಲು ಎಸ್.ಎಂ.ಎಸ್. ವ್ಯವಸ್ಥೆ ಜಾರಿಗೊಳಿಸಲಾಗಿದೆ. ಎಸ್.ಎಂ.ಎಸ್. ಮೂಲಕ ಅವರ ಹಕ್ಕಿನ ಆಹಾರಧಾನ್ಯ ಮಾಹಿತಿ ಪಡೆಯಬಹುದು.

11. ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿವಾರು ವಿತರಿಸಲಾಗುವ ಆಹಾರಧಾನ್ಯ ಹಂಚಿಕೆ ವಿವರದ ತಃಖ್ತೆಯನ್ನು ನೀಡಲಾಗುತ್ತಿದೆ. ಅದರಲ್ಲಿ ಪ್ರತಿ ಕಾರ್ಡಗೆ ನೀಡಲಾಗುತ್ತಿರುವ ಹಂಚಿಕೆ ಪ್ರಮಾಣ, ದರದ ಮಾಹಿತಿ ಲಭ್ಯವಿದ್ದು, ಪಡಿತರ ಎತ್ತುವಳಿ ಮಾಡುವ ವೇಳೆ ಅದರಲ್ಲಿ ಎಲ್ಲಾ ಕಾರ್ಡುದಾರರು ಸಹಿ ಮಾಡುವುದರಿಂದ ಅವರಿಗೆ ನೀಡಲಾಗುವ ವಿತರಣಾ ಪ್ರಮಾಣ ಕಾರ್ಡುದಾರರಿಗೆ ತಿಳಿಯುತ್ತದೆ.

12. ವಿವಿಧ ಹಂತದಲ್ಲಿ ಜಾಗೃತಿ ಸಮಿತಿಗಳನ್ನು ರಚಿಸಲಾಗುತ್ತಿದೆ.

ಊ) ಭತ್ತ ಬೆಳೆಯುವ ಪ್ರಮಾಣ ಹೆಚ್ಚಾಗಿರುವ ಕುರಿತು ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ.